# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1233-2016 ಡಿ .ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br><br>ವಾಸ್ತವ್ಯ | ಎನ್.ಎಂ.ನಾರಾಯಣಹೆಗ್ಡೆ<br>ಮಹಾಬಲೇಶ್ವರ್ ಹೆಗ್ಡೆ<br>60 ವರ್ಷ<br>ಸಾರ್ವಜನಿಕ ಸಂಪರ್ಕಾಧಿಕಾರಿ, ಸಂಯುಕ್ತ ಕರ್ನಾಟಕ ದಿನಪತ್ರಿಕೆ<br>ಬೆಂಗಳೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 01-03-2024.** |

**ಮುಖ್ಯ ವಿಚಾರಣೆಃ ಶ್ರೀ ಸಿ.ಎಲ್.ಬಿ. ವಕೀಲರಿಂದಃ**

ನನಗೆ ಆರೋಪಿ ಗೊತ್ತು. ಆರೋಪಿ ನಮ್ಮ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಕೊಡಗು ಜಿಲ್ಲೆಗಳ ವಿಸ್ತರಣಾಧಿಕಾರಿಯಾಗಿ 2004 ರ ಆಸುಪಾಸಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

2.ಪಿರ್ಯಾದಿದಾರರು ನನಗೆ ಗೊತ್ತು. ಪಿರ್ಯಾದಿದಾರರು ನಂಜನಗೂಡಿನಲ್ಲಿ ನಮ್ಮ ಪತ್ರಿಕೆಯ ಏಜೆಂಟರ್ ಆಗಿ ಹಾಗೂ ಬಿಡಿಸುದ್ದಿದಾರರಾಗಿ ಕೆಲಸ ಮಾಡುತ್ತಿದ್ದರು. ಪಿರ್ಯಾದಿದಾರರು ಪ್ರತಿದಿನ ಸುಮಾರು 100 ದಿನ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದರು. ಪಿರ್ಯಾದಿದಾರರಿಗೆ ತಿಂಗಳ ಲೆಕ್ಕದಲ್ಲಿ ಪತ್ರಿಕೆಯ ಬಿಲ್ ಅನ್ನು ಅವರ ಕಮೀಷನ್ ಅನ್ನು ಕಡಿತ ಮಾಡಿ ನೀಡಲಾಗುತ್ತಿತ್ತು.

ಪಿರ್ಯಾದಿದಾರರಿಗೆ ನೀಡಿದ ಬಿಲ್ ಅನ್ನು ಹೆಚ್ಚಿನ ಅಂಶ ಪತ್ರಿಕೆಯ ವಿಸ್ತರಣಾಧಿಕಾರಿಯವರು ಸ್ವೀಕರಿಸುತ್ತಿದ್ದರು. ಪಿರ್ಯಾದಿದಾರರು ಹೆಚ್ಚಿನ ಅಂಶ ಪತ್ರಿಕೆಯ ಬಿಲ್ಲನ್ನು ಚೆಕ್ ಮುಖೇನ ಪಾವತಿ ಮಾಡುತ್ತಿದ್ದರು. ಪಿರ್ಯಾದಿದಾರರು ತೆಗೆದುಕೊಳ್ಳುವ ಪತ್ರಿಕೆಯ ಮತ್ತು ನಿಯತಕಾಲಿಕೆಗಳ ಆಧಾರದ ಮೇರೆಗೆ ಕಮೀಷನ್ ಅನ್ನು ನಿರ್ಧರಿಸಲಾಗುತ್ತಿದ್ದುದ್ದರಿಂದ ಅವರಿಗೆ ತಿಂಗಳೊಂದಕ್ಕೆ ಗರಿಷ್ಟ ರೂ.8,000/- ಗಳು ಕಮೀಷನ್ ಬರುತ್ತಿತ್ತು. ದಿ.08-08-2020 ರಿಂದ ಪಿರ್ಯಾದಿದಾರರು ನಮ್ಮ ಪತ್ರಿಕೆಯ ಏಜೆಂಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.

3. ನಾನು ದಿ.01-04-2014 ರಿಂದ 28-02-2020 ರವರೆಗೆ ಪಿರ್ಯಾದಿದಾರರು ನಮ್ಮ ಪತ್ರಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯ ನೀಡುತ್ತಿದ್ದ ಜಮಾ ಮತ್ತು ಖರ್ಚಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ತಾಂತ್ರಿಕ ಕಾರಣಗಳಿಂದಾಗಿ ದಿ.01-04-2014 ಕ್ಕಿಂತ ಹಿಂದಿನ ದಾಖಲೆಗಳು ಸಧ್ಯಕ್ಕೆ ನಮ್ಮ ಕಚೇರಿಯಲ್ಲಿ ಲಭ್ಯವಿರುವುದಿಲ್ಲ.

4. ಸಾಕ್ಷಿಯು Agency of Ledger ಅನ್ನು ಹಾಜರುಪಡಿಸಿದ್ದು ಅದನ್ನು ನಿಡಿ-15 ಎಂದು, ಸಾಕ್ಷಿಯು Security agency Ledger ಅನ್ನು ಹಾಜರುಪಡಿಸಿದ್ದು ಅದನ್ನು ನಿಡಿ-16 ಎಂದು, ಸಾಕ್ಷಿಯು Innovice ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-17 ಎಂದು, ದಿ.07-08-2020 ರಂದು ಪಿರ್ಯಾದಿದಾರರಿಗೆ ಕಳುಹಿಸಿದ ನೋಟಿಸ್ ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-18 ಎಂದು, ದಿ.01-09-2014 ರ ಕಚೇರಿ ಆದೇಶದ ಸ್ವಯಂ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-19 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಪಿರ್ಯಾದಿ ಪರ ಶ್ರೀ ಎನ್.ಯು ವಕೀಲರಿಂದಃ-</u>**

ಪಿರ್ಯಾದಿದಾರರು ಆರೋಪಿ ವಿರುದ್ಧ ಈ ಪ್ರಕರಣವನ್ನು ಏಕೆ ದಾಖಲು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**